ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ ಮಲ್ಲೇಶ್ವರಂ, ಬೆಂಗಳೂರು-12.**

ಸಂಖ್ಯೆ: ಪಪೂಶಿಇ/ಪರೀಕ್ಷೆ/ನೋ&ಫ/ಜು-18/2018-19 ದಿನಾಂಕ: 02.08.2018

ಪರೀಕ್ಷಾ ತುರ್ತು

**ಸುತ್ತೋಲೆ**

ವಿಷಯ: 2019ರ ಮಾರ್ಚ್‌ನಲ್ಲಿ ನಡೆಸುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಪುನರಾವರ್ತಿತ (Repeaters) ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ಸಂದಾಯ ಮಾಡಿ OMR ನಮೂನೆಯಲ್ಲಿ ಅರ್ಜಿ ಸಲ್ಲಿಸುವ ಬಗ್ಗೆ.

ಉಲ್ಲೇಖ: 1. ಕಛೇರಿಯ ಸುತ್ತೋಲೆ ಸಂಖ್ಯೆ ಪಪೂಶಿಇ/ಪರೀಕ್ಷೆ/ನೋ&ಫ/2017-18 ದಿನಾಂಕ: 26.07.2018 (ಪರೀಕ್ಷಾ ಶುಲ್ಕ ಪಾವತಿಸುವ ಬಗ್ಗೆ)

2. ಕಛೇರಿಯ ಸುತ್ತೋಲೆ ಸಂಖ್ಯೆ ಪಪೂಶಿಇ/ಪರೀಕ್ಷೆ/ನೋ&ಫ/2018-19 ದಿನಾಂಕ: 10.05.2018 (ಫಲಿತಾಂಶ ತಿರಸ್ಕರಣೆ ಬಗ್ಗೆ)

* * * * *

**I. OMR ಅರ್ಜಿ ನಮೂನೆ ಹೊಂದಿದ ಅನುತ್ತೀರ್ಣ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ತೆಗೆದುಕೊಳ್ಳುವ ಬಗ್ಗೆ:**

1. ಹಿಂದಿನ ವರ್ಷಗಳಲ್ಲಿ ನಡೆಸಿದ ಕೆಲವು ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ OMR ನಮೂನೆಯಲ್ಲಿ ಅನುತ್ತೀರ್ಣ ಅಂಕಪಟ್ಟಿ-ವ-ಪರೀಕ್ಷಾ ಅರ್ಜಿಗಳನ್ನು (Marks Card cum Application) ಮುದ್ರಿಸಿ ಈ ಹಿಂದೆ ಕಳುಹಿಸಿಕೊಡಲಾಗಿದೆ. ಅದೇ ರೀತಿ ಈ ಸುತ್ತೋಲೆಯೊಂದಿಗೆ 2018ರ ಜುಲೈನಲ್ಲಿ ನಡೆಸಿದ ಪೂರಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳ OMR ಅಂಕಪಟ್ಟಿ-ವ-ಪರೀಕ್ಷಾ ಅರ್ಜಿ OMR (Marks Card cum Application) ಗಳನ್ನು ಮುದ್ರಿಸಿ ಕಳುಹಿಸಿಕೊಡಲಾಗಿದೆ. ಈ OMR ನಮೂನೆಗಳನ್ನು ಸ್ಕ್ಯಾನಿಂಗ್ ಮಾಡಲಾಗುತ್ತದೆ. ಆದುದರಿಂದ ಶುಲ್ಕ ಪಾವತಿಸಿದ ಅನುತ್ತೀರ್ಣ ಅಭ್ಯರ್ಥಿಗಳ OMR ಅಂಕಪಟ್ಟಿಗಳಲ್ಲಿನ ವಿವರಗಳನ್ನು ಎಚ್ಚರಿಕೆಯಿಂದ ಭರ್ತಿ ಮಾಡಿ ಶೇಡಿಂಗ್ ಮಾಡುವುದು.
2. ಪರೀಕ್ಷಾ ಶುಲ್ಕ ಕಟ್ಟಿಸಿಕೊಂಡು OMR ಅನುತ್ತೀರ್ಣ ಅಂಕಪಟ್ಟಿಗಳಲ್ಲಿ ಅಭ್ಯರ್ಥಿಗಳಿಂದ ಸಹಿಯನ್ನು ಪಡೆದುಕೊಳ್ಳುವುದು. OMR ಅಂಕಪಟ್ಟಿಗಳಲ್ಲಿನ ಉಳಿದ ಮಾಹಿತಿಗಳನ್ನು ಕಾಲೇಜಿನ ಪ್ರಾಂಶುಪಾಲರು / ಸಿಬ್ಬಂದಿಯವರು ಭರ್ತಿ ಮಾಡಿ ಶೇಡಿಂಗ್ ಮಾಡುವುದು.
3. ಅನುತ್ತೀರ್ಣ OMR ಅಂಕಪಟ್ಟಿಗಳಲ್ಲಿ ಭಾವಚಿತ್ರ ಮುದ್ರಿತವಾಗಿದ್ದಾಗ್ಯೂ ಸಹ ನಿಗದಿತ ಅಂಕಣದಲ್ಲಿ ಅಭ್ಯರ್ಥಿಗಳ ಇತ್ತೀಚಿನ ಪಾಸ್‌ಪೋರ್ಟ್ ಸೈಜಿನ ನೈಜ ಭಾವಚಿತ್ರವನ್ನು ಕಡ್ಡಾಯವಾಗಿ ಅಂಟಿಸುವುದು. ಭಾವಚಿತ್ರದ ಮೇಲೆ ಪ್ರಾಂಶುಪಾಲರು ಸಹಿ ಮಾಡಬಾರದು ಹಾಗೂ ಭಾವಚಿತ್ರವನ್ನು Pin ಮಾಡಬಾರದು.
4. OMR ಅಂಕಪಟ್ಟಿ ಆಧಾರದ ಮೇಲೆ ಪರೀಕ್ಷಾ ಶುಲ್ಕ ಕಟ್ಟಿದ ಎಲ್ಲಾ ಪುನರಾವರ್ತಿತ ಅಭ್ಯರ್ಥಿಗಳಿಗೆ ಅರ್ಜಿ ಕ್ರಮ ಸಂಖ್ಯೆ (Application Serial Number) ಕಾಲಂನಲ್ಲಿ **1001** ರಿಂದ ಪ್ರಾರಂಭಿಸಿ ಸಂಖ್ಯೆಗಳನ್ನು ನೀಡಿ ಮುಂದುವರಿಸಿ ಸಂಖ್ಯೆಗಳಿಗನುಗುಣವಾಗಿ ಶೇಡಿಂಗ್ ಮಾಡಬೇಕು.
5. ಶುಲ್ಕ ಪಾವತಿಸಿದ ಅಭ್ಯರ್ಥಿಗಳ OMR ಅಂಕಪಟ್ಟಿಗಳನ್ನು ಟ್ಯಾಗ್ ಅಥವಾ ಪಿನ್ ಮಾಡದೆ ಅರ್ಜಿಗಳನ್ನು ಪಾಲಿಥಿನ್ ಕವರಿನಲ್ಲಿರಿಸಬೇಕು.
6. ಅಭ್ಯರ್ಥಿಗಳ ಮಾಹಿತಿಯನ್ನು OMR ಅಂಕಪಟ್ಟಿಗಳಲ್ಲಿ ಭರ್ತಿ ಮಾಡಿ ಶೇಡಿಂಗ್ ಮಾಡುವಲ್ಲಿ ಎಚ್ಚರ ವಹಿಸುವುದು.

**II. ಹಿಂದಿನ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿ OMR ಅಂಕಪಟ್ಟಿ ನಮೂನೆ ಇಲ್ಲದ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಪಡೆಯುವ ಬಗ್ಗೆ :**

ಹಿಂದಿನ ವರ್ಷಗಳ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ MCAಗಳನ್ನು ಮುದ್ರಿಸಿ ಕಳುಹಿಸಿ ಕೊಡಲಾಗಿತ್ತು. ಅಂತಹ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸುವಾಗ MCA ಗಳನ್ನು ಬಳಸಿಕೊಳ್ಳುವುದು. ಜೆರಾಕ್ಸ್ ಮಾಡಿದ, ಟೈಪ್ ಮಾಡಿದ ಅಥವಾ ಕೈಬರಹದ ಪರೀಕ್ಷಾ ಅರ್ಜಿಗಳ ಆಧಾರದ ಮೇಲೆ ಶುಲ್ಕಗಳನ್ನು ಕಟ್ಟಿಸಿ ಕೊಳ್ಳಬಾರದು. ಟೈಪ್ ಮಾಡಿದ್ದ ಅಥವಾ ಕೈಬರಹದ ಅರ್ಜಿಗಳನ್ನು ಸಲ್ಲಿಸಿದರೆ ತಿರಸ್ಕರಿಸಲಾಗುವುದು.

ದಿನಾಂಕ: 30.08.2018 ರೊಳಗೆ ಫಲಿತಾಂಶ ತಿರಸ್ಕರಣೆಗೆ ಅನುಮತಿ ಪಡೆದು ದಂಡ ಶುಲ್ಕವಿಲ್ಲದೆ ಪರೀಕ್ಷಾ ಶುಲ್ಕ ಪಾವತಿಸಲು ಅವಕಾಶ ನೀಡಿದೆ. ಶುಲ್ಕ ಪಾವತಿಸಿದ ನಂತರ ಉತ್ತೀರ್ಣ ಮೂಲ ಅಂಕಪಟ್ಟಿಯನ್ನು / ಅನುತ್ತೀರ್ಣ ಅಂಕಪಟ್ಟಿಯನ್ನು ಪ್ರಾಂಶುಪಾಲರು ಖುದ್ದಾಗಿ ಪರಿಶೀಲಿಸಿ ದೃಢೀಕರಿಸಿ ಇತರೆ ಪರೀಕ್ಷಾ ಅರ್ಜಿಗಳೊಂದಿಗೆ ಕಳುಹಿಸಿಕೊಡಬೇಕು.

**"ಫಲಿತಾಂಶ ತಿರಸ್ಕರಣೆಗೆ ಅನುಮತಿಯನ್ನು ಪ್ರಾಂಶುಪಾಲರ ಮುಖಾಂತರ ಕೇಂದ್ರ ಕಛೇರಿಯಿಂದ ಕಡ್ಡಾಯವಾಗಿ ಪಡೆದುಕೊಳ್ಳಬೇಕು"**

**ಫಲಿತಾಂಶ ತಿರಸ್ಕರಣೆಯಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ:**

ಫಲಿತಾಂಶ ತಿರಸ್ಕರಿಸಲು ಕಳುಹಿಸುವಾಗ 30–34 ಅಂಕಗಳು ಪಡೆದು ಉತ್ತೀರ್ಣಗೊಂಡಿರುವ ವಿಷಯಗಳ ಫಲಿತಾಂಶವನ್ನು ಸಹ ಕಡ್ಡಾಯವಾಗಿ ತಿರಸ್ಕರಿಸಬೇಕು ಈ ನಿಯಮ ಭಾಗ–1 ಮತ್ತು ಭಾಗ–2ಕ್ಕೆ ಪ್ರತ್ಯೇಕವಾಗಿ ಅನ್ವಯಿಸುತ್ತದೆ.

2. **ಉತ್ತೀರ್ಣ ಹಾಗೂ ಅನುತ್ತೀರ್ಣ ವಿದ್ಯಾರ್ಥಿಗಳು ಫಲಿತಾಂಶ ತಿರಸ್ಕರಿಸುವ ಅರ್ಜಿಗಳಗೆ ಅರ್ಜಿ ಸಂಖ್ಯೆ ನೀಡುವ ಬಗ್ಗೆ :**

   1. ಫಲಿತಾಂಶ ತಿರಸ್ಕರಣೆಗೆ ಅನುಮತಿ ನೀಡಿದ ಅನುತ್ತೀರ್ಣ OMR ಅಂಕಪಟ್ಟಿ–ವ–ಅರ್ಜಿಗಳಿಗೆ **1001** ರಿಂದ ಕ್ರಮ ಸಂಖ್ಯೆಯನ್ನು ನೀಡುವ ಪುನರಾವರ್ತಿತ ಅರ್ಜಿಗಳೊಂದಿಗೆ ಸೇರಿಸಿ ಸಂಖ್ಯೆಯನ್ನು ನೀಡಬೇಕು.
   2. ಉತ್ತೀರ್ಣ ವಿದ್ಯಾರ್ಥಿಗಳು ಫಲಿತಾಂಶ ತಿರಸ್ಕರಣೆಗೆ ಅನುಮತಿ ಪಡೆದು ಶುಲ್ಕ ಕಟ್ಟಿದ ವಿದ್ಯಾರ್ಥಿಗಳ ಮೂಲ ಉತ್ತೀರ್ಣ ಪ್ರಮಾಣ ಪತ್ರಗಳಿಗೆ ಅರ್ಜಿ ಕ್ರಮಸಂಖ್ಯೆ **4001** ರಿಂದ ಪ್ರಾರಂಭಿಸಿ ಪ್ರತ್ಯೇಕ ಬಂಚ್ ಮಾಡಬೇಕು.

3. **ಅರ್ಜಿಗಳನ್ನು ವಿದ್ಯಾರ್ಥಿ ಪಟ್ಟಿಯೊಂದಿಗೆ (FEE STATEMENT) ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವ ಬಗ್ಗೆ:**

   ಪರೀಕ್ಷಾ ಶುಲ್ಕ ಕಟ್ಟಿದ **1001, 3001** ಹಾಗೂ **4001**ರ ಕ್ರಮಗಳನ್ನು ನೀಡಿದ ವಿದ್ಯಾರ್ಥಿಗಳ ಅರ್ಜಿಗಳು ಮತ್ತು ಶುಲ್ಕದ ಮಾಹಿತಿ (FEE STATEMENT) ಗಳನ್ನು ಕೆಳಗೆ ತಿಳಿಸಿರುವ ನಮೂನೆಯಂತೆ ತಯಾರಿಸಿ ಇದರೊಂದಿಗೆ ಮೂಲ ಚಲನ್‌ನನ್ನು ಒಂದೇ ಲಕೋಟೆಯಲ್ಲಿರಿಸುವುದು. ಲಕೋಟೆಯ ಮೇಲೆ ಕಾಲೇಜಿನ ಸಂಕೇತ ಸಂಖ್ಯೆ ವಿಳಾಸದ ಜೊತೆಗೆ "ಪುನರಾವರ್ತಿತ ಅಭ್ಯರ್ಥಿಗಳ ಅರ್ಜಿಗಳು" (REPEATER'S APPLICATIONS) ಎಂದು ಬರೆದು ದಿನಾಂಕ 01.09.2018 ರಂದು ಒಂದೇ ಕಂತಿನಲ್ಲಿ ಪರೀಕ್ಷಾ ಅರ್ಜಿಗಳನ್ನು ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ತಲುಪಿಸುವುದು. ದಿನಾಂಕ 03.09.2018 ರಂದು (ದಂಡ ಶುಲ್ಕ ರಹಿತ ಅರ್ಜಿಗಳನ್ನು) ದಿನಾಂಕ **18.09.2018** ರಂದು (ದಂಡ ಶುಲ್ಕ ಸಹಿತ ಅರ್ಜಿಗಳನ್ನು) ಜಿಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲೆಯಲ್ಲಿರುವ ಎಲ್ಲಾ ಕಾಲೇಜುಗಳ ಅರ್ಜಿಗಳನ್ನು ಕೇಂದ್ರ ಕಛೇರಿಗೆ ಖುದ್ದಾಗಿ ಸಲ್ಲಿಸುವುದು.

**ಪುನರಾವರ್ತಿತ ಅಭ್ಯರ್ಥಿಗಳ ಅರ್ಜಿ ಮತ್ತು ಪರೀಕ್ಷಾ ಶುಲ್ಕ ವಿವರಗಳ ನಮೂನೆ (Repeater's Fee Statement)**

DEPARTMENT OF PRE-UNIVERSITY EDUCATION, 18TH CROSS, MALLESHWARAM, BANGALORE-560012

Fee Statement (for Repeaters)

Name of the College College code College Seal

| 1 | 2 | 3 | 4 | 5 | | 6 | 7 | 8 | 9 | 10 | 11 | 12 | 13 | 14 |
|---|---|---|---|---|---|---|---|---|---|---|---|---|---|---|
| APP SL No. | Name | Exam Reg No. | Year & Month | Categories | | Subjects offered | Date of Exam fees paid | Exam fee | M.C fee | Late fee | Spl late fee | Total amount | Challan no & date | Remarks |
| | | | | SC ST C1 | Others | | | | | | | | | |
| 1001 | | | | | | | | | | | | | | |
| | | | | | | | | | | | | | | |
| | Total | | | | | | | | | | | | | |

ವಿಶೇಷ ಸೂಚನೆ:

1. ಶೇಡಿಂಗ್ ಮಾಡುವಲ್ಲಿ ಆಗುವ ಪ್ರತಿ ತಪ್ಪಿಗೆ ಪ್ರಾಂಶುಪಾಲರಿಗೆ ರೂ. **1000/-** ದಂಡ ವಿಧಿಸಲಾಗುವುದು.
2. OMR ನಮೂನೆಗಳನ್ನು ಬಂಡಲ್ ಮಾಡಿ ಲಕೋಟೆಯ ಮೇಲೆ ಕಾಲೇಜಿನ ಸಂಕೇತ ಸಂಖ್ಯೆ ಮತ್ತು ವಿಳಾಸದೊಂದಿಗೆ ಪುನರಾವರ್ತಿತ ಅಭ್ಯರ್ಥಿಗಳ ಅರ್ಜಿಗಳು ಎಂದು ನಮೂದಿಸಿ, ದಂಡ ಶುಲ್ಕ ರಹಿತ ಸಲ್ಲಿಕೆಯಾದ ಅರ್ಜಿಗಳೆಂದು ಬರೆದು, ದಿನಾಂಕ **03.09.2018** ರಂದು ದಂಡ ಶುಲ್ಕ ರಹಿತ ಅರ್ಜಿಗಳನ್ನು, ದಿನಾಂಕ **18.09.2018** ರಂದು ದಂಡ ಶುಲ್ಕ ಸಹಿತ ಅರ್ಜಿಗಳನ್ನು, ಜಿಲ್ಲಾ ಉಪನಿರ್ದೇಶಕರು **ನೇರವಾಗಿ ಇಲಾಖಾ ಕೇಂದ್ರ ಕಛೇರಿಯ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದು.**

24/8/18

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಯನ್ನು:

1. ಜಿಲ್ಲಾ ಉಪನಿರ್ದೇಶಕರಿಗೆ
2. ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಗೆ.
3. ಸಹಾಯ ನಿರ್ದೇಶಕರು ಇ-ಆಡಳಿತ ಶಾಖೆ, ಪಪೂಶಿಇ (ಅಂತರ್ಜಾಲದಲ್ಲಿ ಪ್ರಕಟಿಸಲು).
4. ಹೆಚ್ಚುವರಿ ಕಛೇರಿ ಪ್ರತಿ.

ಇಲಾಖೆಯಿಂದ ಅಧಿಕೃತವಾಗಿ ಮುದ್ರಿಸಿದ ಇಲ್ಲವೆ ದ್ವಿಪ್ರತಿ ನೀಡಿರುವಂತಹ ಅರ್ಜಿಗಳ ಆಧಾರದ ಮೇಲೆ ಮಾತ್ರ ಶುಲ್ಕ ಕಟ್ಟಿಸಿ ಕೊಳ್ಳುವುದು. MCA ಗಳಲ್ಲಿ ವಿದ್ಯಾರ್ಥಿಗಳ ಭಾವಚಿತ್ರ ಮುದ್ರಿತವಾಗದಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಂದ ಮೂರು ಭಾವಚಿತ್ರಗಳನ್ನು ಪಡೆದು ಕಾಲೇಜುಗಳಲ್ಲಿ ಕಾಯ್ದಿರಿಸಿಕೊಳ್ಳುವುದು. ಇಂತಹ ವಿದ್ಯಾರ್ಥಿಗಳ ಅರ್ಜಿಗಳಿಗೆ ಅರ್ಜಿ ಕ್ರಮಸಂಖ್ಯೆಯ (Application Serial Number) ಕಾಲಂನಲ್ಲಿ **3001** ರಿಂದ ನೀಡಿ ಪ್ರತ್ಯೇಕ ಬಂಚ್ ಮಾಡಿ ಲಕೋಟೆಯಲ್ಲಿರಿಸುವುದು.

III. ಸರ್ಕಾರದ ಆದೇಶ ಸಂಖ್ಯೆ ಇಡಿ 195 ಡಿಜಿಡಿ 2017 ಬೆಂಗಳೂರು ದಿನಾಂಕ: 20.03.2018 ರಂತೆ ಪರೀಕ್ಷಾ ಶುಲ್ಕ ಹಾಗೂ ಫಲಿತಾಂಶ ತಿರಸ್ಕರಣಾ ಶುಲ್ಕ ಹಾಗೂ ದಂಡ ಶುಲ್ಕಗಳನ್ನು ಪರಿಷ್ಕರಿಸಿದೆ.

**ಮಾರ್ಚ್ 2019ರಲ್ಲಿ ನಡೆಸಲಾಗುವ ವಾರ್ಷಿಕ ಪರೀಕ್ಷೆಗೆ ಅನುತ್ತೀರ್ಣ ವಿದ್ಯಾರ್ಥಿಗಳು ಪಾವತಿಸಬೇಕಾದ ಶುಲ್ಕ ಮತ್ತು ಫಲಿತಾಂಶ ತಿರಸ್ಕರಣಾ ಶುಲ್ಕಗಳ ವಿವರ:**

| ಪರೀಕ್ಷಾ ಶುಲ್ಕ (ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಪ್ರವರ್ಗ–1ರ ವಿದ್ಯಾರ್ಥಿಗಳನ್ನು ಹೊರತು ಪಡಿಸಿ) | |
|---|---|
| ಒಂದು ವಿಷಯಕ್ಕೆ | ರೂ 140/– |
| ಎರಡು ವಿಷಯಕ್ಕೆ | ರೂ 270/– |
| ಮೂರು ಅಥವಾ ಹೆಚ್ಚಿನ ವಿಷಯಗಳು | ರೂ 400/– |
| ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಪ್ರವರ್ಗ–1ರ ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಂದ ಕಡ್ಡಾಯವಾಗಿ ಸಲ್ಲಿಸಬೇಕಾದ ಅಂಕಪಟ್ಟಿ ಶುಲ್ಕ | ರೂ 50/– |

| ಫಲಿತಾಂಶ ತಿರಸ್ಕರಣಾ ಶುಲ್ಕ | |
|---|---|
| ಪ್ರಥಮ ಬಾರಿಗೆ ಒಂದು ವಿಷಯಕ್ಕೆ | ರೂ 175/– |
| ದ್ವಿತೀಯ ಹಾಗೂ ಅಂತಿಮ ಬಾರಿಗೆ ಒಂದು ವಿಷಯಕ್ಕೆ | ರೂ 350/– |

**ಮಾರ್ಚ್ 2019ರಲ್ಲಿ ನಡೆಸುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಅನುತ್ತೀರ್ಣ ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು ನಿಗದಿಪಡಿಸಿರುವ ದಿನಾಂಕಗಳು:**

| ಕ್ರಮ ಸಂಖ್ಯೆ | ಅರ್ಜಿಗಳ ವಿವರ | ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು ಕಡೇ ದಿನಾಂಕ | ಕಾಲೇಜಿನವರು ಪರೀಕ್ಷಾ ಶುಲ್ಕವನ್ನು ಒಂದೇ ಕಂತಿನಲ್ಲಿ ಖಜಾನೆಗೆ ಸಂದಾಯ ಮಾಡಬೇಕಾದ ದಿನಾಂಕ | ಕಾಲೇಜಿನವರು ಪರೀಕ್ಷಾ ಅರ್ಜಿಗಳನ್ನು ಮೂಲ ಚಲನ್ ಸಹಿತ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸಬೇಕಾದ ದಿನಾಂಕ |
|---|---|---|---|---|
| **1.** | ದಂಡ ಶುಲ್ಕವಿಲ್ಲದೆ | **30.08.2018** | **31.08.2018** | **01.09.2018** |
| **2.** | ದಂಡ ಶುಲ್ಕ ದೊಂದಿಗೆ ರಜಾ ದಿನಗಳನ್ನು ಹೊರತುಪಡಿಸಿ ಪರೀಕ್ಷಾ ಶುಲ್ಕದ ಜೊತೆಗೆ ದಿನವೊಂದಕ್ಕೆ ರೂ. 50.00 ರಂತೆ ಗರಿಷ್ಠ ರೂ. 500.00 | 11.09.2018 | 14.09.2018 | **15.09.2018** |

1. <u>**ಉತ್ತೀರ್ಣ ಹಾಗೂ ಅನುತ್ತೀರ್ಣ ವಿದ್ಯಾರ್ಥಿಗಳು ಫಲಿತಾಂಶ ತಿರಸ್ಕರಿಸಲು ಕೊನೆಯ ದಿನಾಂಕ :**</u>

ಉತ್ತೀರ್ಣ ಹಾಗೂ ಅನುತ್ತೀರ್ಣ ವಿದ್ಯಾರ್ಥಿಗಳು ಪಾಸಾದ ಯಾವುದಾದರೂ ವಿಷಯದಲ್ಲಿ / ಗಳಲ್ಲಿ ಫಲಿತಾಂಶ ತಿರಸ್ಕರಿಸಿ, ಪುನಃ ಬರೆಯಲು ಇಚ್ಛಿಸಿದಲ್ಲಿ ನಿಯಮಾನುಸಾರ ಅವಕಾಶವಿರುತ್ತದೆ. ಉತ್ತೀರ್ಣ ವಿದ್ಯಾರ್ಥಿಗಳು ಫಲಿತಾಂಶ ತಿರಸ್ಕರಣೆ ಮಾಡುವ ಸಂದರ್ಭದಲ್ಲಿ ಅರ್ಜಿ ನಮೂನೆಯಲ್ಲಿ ತಿಳಿಸಿರುವಂತೆ ರೂ. 20/– ಛಾಪಾ ಕಾಗದದಲ್ಲಿ ನೋಟರಿ ಮುಂದೆ ಘೋಷಣೆ ಮಾಡಿದ ಮೂಲ ಪತ್ರವನ್ನು ಕಡ್ಡಾಯವಾಗಿ ನೀಡತಕ್ಕದ್ದು. ಇಂತಹ ವಿದ್ಯಾರ್ಥಿಗಳು ಪ್ರಾಂಶುಪಾಲರ ಮುಖಾಂತರ ಕೇಂದ್ರ ಕಛೇರಿಗೆ ಅರ್ಜಿ ಸಲ್ಲಿಸಿ